**<u>ಸಾಕ್ಷಿಯನ್ನು ದಿನಾಂಕ 01-12-2023 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>.**

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಆರ್.ಎಲ್.ಹೆಚ್. ವಕೀಲರಿಂದಃ</u>**

ಸಾಮಾನ್ಯವಾಗಿ ಕ್ರಯ ಪತ್ರ, ವಿಲ್ ಅಥವಾ ಇತರೇ ಪತ್ರಗಳನ್ನು ಬರೆದ ನಂತರ ಅದರ ಬರಹಗಾರರು ಸದರಿ ದಾಖಲೆಯನ್ನು ತಾವೇ ಬರೆದಿರುವುದಾಗಿ ದಾಖಲೆಯಲ್ಲಿ ನಮೂದು ಮಾಡಿ ಸಹಿ ಮಾಡಬೇಕಾಗುತ್ತದೆ ಎಂದು ಸೂಚಿಸಿದರೆ ಸಾಕ್ಷಿ ಕೆಲವು ಬರಹಗಾರರು ಆ ರೀತಿ ಮಾಡುತ್ತಾರೆ ಮತ್ತೆ ಕೆಲವರು ಮಾಡುವುದಿಲ್ಲ ಎನ್ನುತ್ತಾರೆ. ನಿಡಿ-1 ರ ದಾಖಲೆಯನ್ನು ನೋಟರಿ ಮಾಡುವ ಮೊದಲು ಅವುಗಳನ್ನು ಯಾರ ಬಳಿ ಬರೆಸಲಾಯಿತು ಎಂದು ನಾನು ಪಕ್ಷಗಾರರನ್ನು ಕೇಳಿದ್ದೇನೆ. ಸಾಕ್ಷಿ ಸ್ವ-ಇಚ್ಛೆಯಿಂದ ಪಕ್ಷಗಾರರು ವಕೀಲರ ಬಳಿ ಸದರಿ ದಾಖಲೆ ಬರೆಸಿರುವುದಾಗಿ ಹೇಳಿದರೆ ಆದರೆ ವಕೀಲರ ಹೆಸರು ಹೇಳಲಿಲ್ಲ ಎನ್ನುತ್ತಾರೆ.

ನಿಡಿ-1 ರ ದಾಖಲೆಯನ್ನು ನಿಮ್ಮ ಮುಂದೆ ಹಾಜರುಪಡಿಸಿದ ವ್ಯಕ್ತಿ ಇಮಾಮ್ ಸಾಬ ಎಂದು

ಖಚಿತಪಡಿಸಿಕೊಳ್ಳಲು ಆತನ ಆಧಾರ ಕಾರ್ಡ ಅಥವಾ ಇತರೇ ಸರ್ಕಾರಿ ಗುರುತಿನ ಚೀಟಿಗಳನ್ನು ನೀವು ಪರಿಶೀಲನೆ ಮಾಡಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ಆತನ ಆಧಾರ ಕಾರ್ಡ ನೋಡಿದ್ದೇನೆ ಎನ್ನುತ್ತಾರೆ. ಸದರಿ ಇಮಾಮ್ ಸಾಬನಿಗೆ ಸಂಬಂಧಪಟ್ಟ ಆಧಾರ ಕಾರ್ಡ ನಂಬರನ್ನು ನಿಡಿ-1 ರ ದಾಖಲೆಯಲ್ಲಿ ಪಕ್ಷಗಾರರು ನಮೂದಿಸಿಲ್ಲ. ಸದರಿ ಆಧಾರ ಕಾರ್ಡ ನಂಬರನ್ನು ನಾನು ನಿಡಿ-3 ಮತ್ತು 4 ರ ದಾಖಲೆಯಲ್ಲಿ ನಮೂದು ಮಾಡಿಕೊಂಡಿಲ್ಲ. ಇಮಾಮ್ ಸಾಬನ ಜೊತೆ ನನ್ನ ಮುಂದೆ ಹಾಜರಾದರು ಎನ್ನಲಾದ ಸಾಕ್ಷಿದಾರರಿಗೆ ಸಂಬಂಧಪಟ್ಟ ಆಧಾರ ಕಾರ್ಡ ನಂಬರಗಳನ್ನು ನಿಡಿ-1 ರ ದಾಖಲೆಯಲ್ಲಿ ನಮೂದು ಮಾಡಿಲ್ಲ ಮತ್ತು ಸದರಿ ನಂಬರಗಳನ್ನು ನಾನು ನಿಡಿ-3 ಮತ್ತು 4 ರ ದಾಖಲೆಗಳಲ್ಲಿ ಬರೆದುಕೊಂಡಿಲ್ಲ ಎಂದರೆ ಸರಿ. ಇಮಾಮ್ ಸಾಬನಿಗೆ ಸಂಬಂಧಪಟ್ಟ ಆಧಾರ ಕಾರ್ಡನಲ್ಲಿ ನಮೂದಾಗಿದ್ದ ಆತನ ವಯಸ್ಸು ಆತನ ಆಧಾರ ಕಾರ್ಡನಲ್ಲಿ ನಮೂದಾಗಿದ್ದ ಆತನ ವಯಸ್ಸಿನ ವಿವರ ಒಂದೊಕ್ಕೊಂದು ಹೊಂದಾಣಿಕೆ ಆಗಿತ್ತೇ ಎಂಬ ಪ್ರಶ್ನೆಗೆ ಸಾಕ್ಷಿ ಆಗಿತ್ತು ಎನ್ನುತ್ತಾರೆ. ಸಾಕ್ಷಿ ಸ್ವ-ಇಚ್ಛೆಯಿಂದ ದಾಖಲೆ ಪ್ರಕಾರ ಇಮಾಮ್ ಸಾಬನ ವಯಸ್ಸು 70-75 ಆಗಿತ್ತು ಎನ್ನುತ್ತಾರೆ.

ಸಾಮಾನ್ಯವಾಗಿ ದಾಖಲೆಯನ್ನು ನೋಟರಿಕರಿಸಿ ಶುಲ್ಕ ಪಡೆದುಕೊಂಡ ನಂತರ ದಾಖಲೆಯನ್ನು ಹಾಜರುಪಡಿಸಿ ಶುಲ್ಕ ಪಾವತಿ ಮಾಡಿದವರಿಗೆ ರಸೀದಿ ಕೊಡುತ್ತೇನೆ ಎಂದರೆ ಸರಿ. ನಿಡಿ-4(ಎ) ರ ರಸೀದಿಯನ್ನು ಇಮಾಮ್ ಸಾಬನಿಗೆ ಕೊಟ್ಟಿದ್ದೇನೆ. ಯಾವುದೇ ದಾಖಲೆಯನ್ನು ನೋಟರಿಕರಿಸುವ ಮೊದಲು ಅದನ್ನು ಹಾಜರುಪಡಿಸಿದ ವ್ಯಕ್ತಿಯ ಗುರುತನ್ನು ವಕೀಲರ ಮೂಲಕ ನಾವು ಖಚಿತಪಡಿಸಿಕೊಳ್ಳಬೇಕಾಗುತ್ತದೆ ಎಂದು ಸೂಚಿಸಿದರೆ ಸಾಕ್ಷಿ ಪ್ರಮಾಣ ಪತ್ರಗಳಿಗೆ ಮಾತ್ರ ಗುರುತಿನ ಬಗ್ಗೆ ಖಚಿತಪಡಿಸಿಕೊಳ್ಳಬೇಕಾಗುತ್ತದೆ ಬೇರೆ ದಾಖಲೆಗಳಿಗೆ ಅದರ ಅವಶ್ಯಕತೆ ಇಲ್ಲ ಎನ್ನುತ್ತಾರೆ.

ಇಮಾಮ್ ಸಾಬ ಎಂಬ ವ್ಯಕ್ತಿ ನನ್ನ ಬಳಿ ಬಂದೆ ಇಲ್ಲ 2ನೇ ಪ್ರತಿವಾದಿಯ ಮಾತುಕೇಳಿಕೊಂಡು ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**